# <u>ಕರ್ನಾಟಕ ಸರ್ಕಾರದ ನಡವಳಿಗಳು</u>

**ವಿಷಯ:** ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ (ನಿರ್ದೇಶನಾಲಯ)ನಿರ್ದೇಶಕರನ್ನು ಇಲಾಖಾ ಮುಖ್ಯಸ್ಥರೆಂದು ಘೋಷಿಸುವ ಬಗ್ಗೆ.

**ಓದಲಾಗಿದೆ:**

1. ಸರ್ಕಾರಿ ಆದೇಶ ಸಂಖ್ಯೆ:ಸಕಇ 114 ಬಿಇಟಿ 98, ಬೆಂಗಳೂರು ದಿನಾಂಕ: 09-12-1998.
2. ಸರ್ಕಾರಿ ಆದೇಶ ಸಂಖ್ಯೆ:MWD 216 MDS 2010, ಬೆಂಗಳೂರು ದಿನಾಂಕ: 25-10-2013.
3. ಸರ್ಕಾರಿ ಆದೇಶ ಸಂಖ್ಯೆ:ಅಸಂಕಇ 04 ಅಸಂಯೋ 2012, ಬೆಂಗಳೂರು ದಿನಾಂಕ:26-09-2012
4. ಸರ್ಕಾರಿ ಆದೇಶ ಸಂಖ್ಯೆ: MWD 203 MDS 2014, ಬೆಂಗಳೂರು ದಿನಾಂಕ 09-02-2015.
5. ಸರ್ಕಾರಿ ಆದೇಶ ಸಂಖ್ಯೆ: ಆಇ 02 ಟಿಎಫ್‌ಪಿ 2016, ದಿನಾಂಕ 20-01-2016.
6. ನಿರ್ದೇಶಕರು ಅಲ್ಪಸಂಖ್ಯಾತರ ಕಲ್ಯಾಣ ನಿರ್ದೇಶನಾಲಯ, ಬೆಂಗಳೂರು ರವರ ಏಕಕಡತ ಪದ್ಧತಿಯನ್ವಯ ಪ್ರಸ್ತಾವನೆ ಸಂಖ್ಯೆ:ಅಸಂನಿ/ನಿ.ಇ.ಮು/ ಸಿಆರ್-179/2015-16, ದಿನಾಂಕ:02-04-2016.

**<u>ಪ್ರಸ್ತಾವನೆ:-</u>**

ಮೇಲೆ ಓದಲಾದ ಕ್ರ.ಸಂ(1)ರಲ್ಲಿನ ಆದೇಶದಲ್ಲಿ ಅಲ್ಪಸಂಖ್ಯಾತರ ಶೈಕ್ಷಣಿಕ ಹಾಗೂ ಸರ್ವತೋಮುಖ ಅಭಿವೃದ್ದಿ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯ ಪ್ರತ್ಯೇಕವಾಗಿ ಅಸ್ತಿತ್ವಕ್ಕೆ ಬಂದಿದ್ದು, 1999-2000ನೇ ಸಾಲಿನಿಂದ ಕಾರ್ಯನಿರ್ವಹಿಸುತ್ತಿದೆ. ಹಿಂದುಳಿದ ವರ್ಗಗಳ ಇಲಾಖೆಯಿಂದ ಅಲ್ಪಸಂಖ್ಯಾತರಿಗಾಗಿ ಜಾರಿಯಾಗುತ್ತಿದ್ದ ಕಾರ್ಯ ಕ್ರಮಗಳನ್ನು ಈ ಇಲಾಖೆಯು 1999-2000ನೇ ಸಾಲಿನಿಂದ ಅಸ್ತಿತ್ವಕ್ಕೆ ಬಂದಿರುವುದು ಈ ವರ್ಗದ ಅಭಿವೃದ್ಧಿಗಾಗಿ ಸರ್ಕಾರವು ವಿಶೇಷ ಗಮನ ನೀಡುವುದಕ್ಕೆ ಸಾಕ್ಷಿಯಾಗಿದೆ. ಇಲಾಖೆಯನ್ನು ಪ್ರಾರಂಭಿಸುವಾಗ ಅಲ್ಪಸಂಖ್ಯಾತರ ಕಾರ್ಯಕ್ರಮಗಳನ್ನು ಜಿಲ್ಲೆಗಳಲ್ಲಿ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಿರುತ್ತಾರೆ.

ಮೇಲೆ ಓದಲಾದ ಕ್ರ.ಸಂ(2) ರಿಂದ (4)ರಲ್ಲಿನ ಸರ್ಕಾರದ ಆದೇಶಗಳಲ್ಲಿ ಒಟ್ಟು 30 ಜಿಲ್ಲೆಗಳಲ್ಲಿ ಜಿಲ್ಲಾ ಅಧಿಕಾರಿ ಹುದ್ದೆಗಳನ್ನು ಸೃಜಿಸಿ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರತ್ಯೇಕ ಜಿಲ್ಲಾ ಅಧಿಕಾರಿಗಳ ಕಛೇರಿಯನ್ನು ಪ್ರಾರಂಭಿಸಲು ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರ.ಸಂ(5)ರಲ್ಲಿನ ಆದೇಶದಲ್ಲಿ ಸರ್ಕಾರಿ ಇಲಾಖೆಗಳಲ್ಲಿ ಆರ್ಥಿಕ ಅಧಿಕಾರವನ್ನು ಚಲಾಯಿಸುವ ಬಗ್ಗೆ ವಿವಿಧ ಮಟ್ಟದ ಅಧಿಕಾರಿಗಳನ್ನು ಸದರಿ ಆದೇಶದಲ್ಲಿನ ಅನುಬಂಧ-1ರಲ್ಲಿ ಅಧಿಸೂಚಿಸಲಾಗಿದೆ. ಇದೇ ಆದೇಶದ ಅನುಬಂಧ-3ರಲ್ಲಿ ಆಡಳಿತ ಇಲಾಖೆಗಳು ಇಲಾಖಾ ಮುಖ್ಯಸ್ಥರನ್ನು ಘೋಷಿಸದೇ ಇರುವ ಬಗ್ಗೆ ಪಟ್ಟಿ ಮಾಡಲಾಗಿದ್ದು, ಈ ಪಟ್ಟಿಯಲ್ಲಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ಇಲಾಖಾ ಮುಖ್ಯಸ್ಥರನ್ನು ಘೋಷಿಸದೇ ಇರುವುದರಿಂದ, ಸದರಿ ಆದೇಶದ ಅನುಬಂಧ-IIIರ ಕ್ರಮಸಂಖ್ಯೆ-01ರಲ್ಲಿ ನಿರ್ದೇಶಕರನ್ನು ಗುರುತಿಸಬೇಕಾಗಿದ್ದು ಇವರನ್ನು ಇಲಾಖಾ ಮುಖ್ಯಸ್ಥರೆಂದು ಘೋಷಿಸಬೇಕಾಗಿದೆ.